# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

# ಕೆ.ಆರ್.ನಗರ

## ಸಿ.ಸಿ. 1471/2019

**ಪಿಡಬ್ಲೂ-1**

**ಸಿಡಬ್ಲೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಹೇಮಂತಕುಮಾರ |
| ತಂದೆಯ ಹೆಸರು | - | ರಂಗಶೆಟ್ಟಿ |
| ವಯಸ್ಸು | - | 39 ವರ್ಷ |
| ಕೆಲಸ | - | ಖಾಸಗೀ ಕೆಲಸ |
| ವಾಸ | - | ಕೆಸ್ತೂರು ಗ್ರಾಮ |

**ದಿನಾಂಕ 05-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಚಾಸಾ 2 ಮತ್ತು 3 ನಮ್ಮ ಚಿಕ್ಕಪ್ಪ ಮತ್ತು ಚಿಕ್ಕಮ್ಮ,ಚಾಸಾ 5 ನನ್ನ ತಾಯಿ. ಚಾಸಾ 6 ನನ್ನ ಅಣ್ಣ. ಚಾಸಾ 8 ನನ್ನ ಚಿಕ್ಕಪ್ಪ, ಚಾಸಾ 4, 5, 7 ಮತ್ತು 9 ರಿಂದ 11 ಪರಿಚಯ. ಮೃತ ವಿಜಯ ನಮ್ಮ ಚಿಕ್ಕಪ್ಪನ ಮಗ. ಆರೋಪಿ ಗೊತ್ತು. ದಿಃ 23-08-2017 ರಂದು ಸಂಜೆ 4.45 ಗಂಟೆ ಸಮಯದಲ್ಲಿ ನಮ್ಮ ತಾಯಿ, ಚಿಕ್ಕಪ್ಪ, ಚಿಕ್ಕಮ್ಮ, ಚಿಕ್ಕಮ್ಮನ ಮಗ ಎಲ್ಲರೂ ನರಸನಹಳ್ಳಿಯಲ್ಲಿನ ಒಂದು ಸಾವಿಗೆ ಎಂದು ತೆರಳಿ ಅಲ್ಲಿಂದ ಹಿಂದಿರುಗಿ ಬರಬೇಕಾದರೆ ನಮ್ಮ ತಾಯಿ ಮತ್ತು ನಮ್ಮ ಚಿಕ್ಕಪ್ಪನ ಮಗ ಇಬ್ಬರು ಊರಿಗೆ ಬರಲು ಕೆ ಆರ್ ನಗರಕ್ಕೆ ಬಂದು ಕೆ ಆರ್ ನಗರದ ಬಸ್ ನಿಲ್ದಾಣದಲ್ಲಿ ಕೆಸ್ತೂರು ಕೊಪ್ಪಲಿಗೆ ಹೋಗಲು ಬಸ್ ನ್ನು ಹತ್ತುವಾಗ ಬಸ್ ನ ಚಾಲಕ ಅದನ್ನು ಗಮನಿಸದೇ ಸದರಿ ಬಸ್ ಸಂಖ್ಯೆ ಕೆಎ 09-ಎಪ. 4591 ವಾಹನವನ್ನು ಹಿಂದಕ್ಕೆ ತೆಗೆದಿದ್ದು. ಆಸಮಯದಲ್ಲಿ ನಮ್ಮ ಚಿಕ್ಕಪ್ಪನ ಮಗ ವಿಜಯ ಬಸ್ ನ ಹಿಂದಗಡೆ

ಎಡಭಾಗದ ಚಕ್ರಕ್ಕೆ ಸಿಲುಕಿದಾಗ ನಮ್ಮ ಚಿಕ್ಕಪ್ಪನ ಮಗನ ಎಡತೊಡೆಯ ಮೇಲೆ ಬಸ್ ನ ಚಕ್ರ ಹರಿದಿರುತ್ತದೆ.

ನಂತರ, ಸದರಿ ವಿಚಾರವನ್ನು ನಮ್ಮ ತಾಯಿ ನನಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ನಂತರ ಸ್ಥಳದಲ್ಲಿದ್ದವರು ಆಟೋದ ಮುಖಾಂತರ ನಮ್ಮ ಚಿಕ್ಕಪ್ಪನ ಮಗನನ್ನು ಕೆ ಆರ್ ನಗರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಹೆಚ್ಚಿನ ಚಿಕಿತ್ಸೆಗೆಂದು ಮೈಸುರಿನ ಜೆ ಎಸ್ ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದ್ದು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ದಿಃ 25-08-2017 ರಂದು ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ ಮೃತ ಪಟ್ಟಿರುತ್ತಾರೆ.

ನಾನು ದಿಃ 24-08-2017 ರಂದು ಬೆಳಿಗ್ಗೆ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸಾಕ್ಷಿಯು ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದೂರಾಗಿದ್ದು ಅದನ್ನು **ನಿಪಿ 1** ಎಂದು ಹಾಗೂ ಅದೇ ರೀತೀ ಸಾಕ್ಷಿಯ ಸಹಿಯನ್ನು **ನಿಪಿ 1(ಎ)** ಎಂದು ಗುರುತಿಸಲಾಯಿತು.

ನಾನು ದೂರು ನೀಡಿದ ನಂತರ ದಿಃ 24-08-2017 ರಂದು ಬೆಳಿಗ್ಗೆ 11.30 ರಿಂದ 12.15 ಗಂಟೆಯವರೆಗೆ ಕೆ ಆರ್ ನಗರದ ಸರ್ಕಾರಿ ವಾಹನಗಳ ನಿಲ್ದಾಣದಲ್ಲಿ ಅಂಕಣ 6 ರಲ್ಲಿ ಪೊಲೀಸನವರು ಪರಿಶೀಲನೆಯನ್ನು ಮಾಡಿ ಬಸ್‌ನ್ನು ಅಮಾನತು ಪಡಿಸಿಕೊಂಡಿರುತ್ತಾರೆ. ಸದರಿ ಸಮಯದಲ್ಲಿ ನಾನು ಮತ್ತು ಚಾಸಾ 10 ಕುಮಾರಸ್ವಾಮಿ ಹಾಜರಿರುತ್ತೇವೆ.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿ ಸಾಕ್ಷಿಯು ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪಂಚನಾಮೆಯಾಗಿದ್ದು ಅದನ್ನು **ನಿಪಿ 2** ಎಂದು ಹಾಗೂ ಅದೇ ರೀತೀ ಸಾಕ್ಷಿಯ ಸಹಿಯನ್ನು **ನಿಪಿ 2(ಎ)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿ ಸಾಕ್ಷಿಯು ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಮಾನತು ಪಂಚನಾಮೆಯಾಗಿದ್ದು ಅದನ್ನು **ನಿಪಿ 3** ಎಂದು ಹಾಗೂ ಅದೇ ರೀತೀ ಸಾಕ್ಷಿಯ

ಸಹಿಯನ್ನುನಿಪಿ 3(ಎ) ಎಂದು ಗುರುತಿಸಲಾಯಿತು. **ನಿಪಿ 3(ಎ)** ಎಂದು ಗುರುತಿಸಲಾಯಿತು. ನಿಪಿ 3 ಕ್ಕೆ ಸಹಿಯನ್ನು ದಿಃ 24-08-2017 ರಂದು ಪೊಲೀಸ್ ಠಾಣೆಯ ಹತ್ತಿರ ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ಪಡೆದಾಗ ಮದ್ಯಾಹ್ನ 12.30 ಗಂಟೆ ಸಮಯವಾಗಿರುತ್ತದೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ 10 ಕುಮಾರಸ್ವಾಮಿ ಮತ್ತು ಗುರುಪ್ರಸಾದ ಇದ್ದು ಅವರು ಸಹ ಸಹಿ ಮಾಡಿರುತ್ತಾರೆ.

ಸಾಕ್ಷಿ ಕೆ ಎಸ್ ಆರ್ ಟಿ ಸಿ ಬಸ್ ನ 4 ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ **ನಿಪಿ 4** ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ**

ಮೃತ ವಿಜಯರವರವನ್ನು ಮೊದಲು ಕೆ ಆರ್ ನಗರದ ಸರ್ಕಾರಿ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆಯನ್ನು ಕೊಡಿಸಿದ ನಂತರ ಚಾಸಾ 6 ರವರು ವಿಜಯ ರವರನ್ನು ಆ್ಯಂಬುಲೇನ್ಸ ಮುಖಾಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ನಂತರ ಅಲ್ಲಿಂದ ಮೈಸುರೂರಿನ ಜೆ ಎಸ್ ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾ ರೇ ಎಂದರೆ ಸರಿ. ಮೃತ ವಿಜಯರವರಿಗೆ ಸೊಂಟ, ಎಡಗಾಲು ಮತ್ತು ವೃಷಣದ ಬಳಿ ಪೆಟ್ಟಾಗಿರುತ್ತದೆ ಎಂದರೆ ಸರಿ.

ನಂತರ ದಿಃ 25-08-2017 ರಂದು ಬೆಳಿಗೆಗ 8.45 ಗಂಟೆ ಸಮಯದಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ನಾನು ದಿಃ 24-08-2017 ರಂದು ಬೆಳಿಗ್ಗೆ 11.00 ಗಂಟೆ ಸಮಯಕಿದಲ್ಲಿ ನಿಪಿ 1 ರಂತೆ ಲಿಖಿತ ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿ. ನಂತರ ಅದೇ ದಿನ ದಿಃ 24-08-2017 ರಂದು ಕೆ ಆರ್ ನಗರದ ಕೆ ಆರ್ ನಗರದ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾದ ಅಂಕಣ 6 ರ ಮುಂಭಾಗದ ಅಪಘಾತ ಸ್ಥಳವಾದ ಸಿಮೆಂಟ್ ರಸ್ತೆಯ ಬಳಿ ನನ್ನ ಹಾಗೂ ಚಾಸಾ 9 ಮತ್ತು 10 ರವರ ಸಮಕ್ಷಮ ಸ್ಥಳ

ಪಂಚನಾಮೆಯನ್ನು ಬರೆದು ಕಚ್ಚಾ ನಕ್ಷೆಯನ್ನು ಸಹ ತಯಾರು ಮಾಡಿರುತ್ತಾರೆ ಎಂದರೆ ಸರಿ.

ನಂತರ ಅದೇ ದಿನ ಕೆ ಆರ್ ನಗರ ಪೊಲೀಸ್ ಠಾಣೆಯ ಹತ್ತಿರ ಕೆಎ 09-ಎಫ್ 4591 ವಾಹನವನ್ನು ನನ್ನ ಹಾಗೂ ಚಾಸಾ 10 ಮತ್ತು 11 ರವರ ಸಮಕ್ಷಮ ಅಮಾನತು ಪಡಿಸಿಕೊಂಡು ಅಮಾನತು ಪಂಚಾನಮೆಯನ್ನು ಮದ್ಯಾಹ್ನ 12.30 ರಿಂದ 1.15 ವರೆಗೆ ನಿಪಿ 3 ರಲ್ಲಿ ತಿಳಿಸಿರುವ ರೀತಿ ಬರೆದು ನಮ್ಮಗಳ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಮೃತ ವಿಜಯರವರ ಸಾವಿಗೆ ಆರೋಪಿ ಮೇಲೆ ತಿಳಿಸಿದ ಬಸ್ ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಬಸ್ ನ್ನು ಹಿಮ್ಮುಕವಾಗಿ ಚಾಲನೆ ಮಾಡಿರುವುದೇ ಕಾರಣ ಎಂದರೆ ಸರಿ.

**ಪಾಟೀ ಸವಾಲು ಶ್ರೀ ಕೆ ಆರ್ ಸಿ ಆರೋಪಿ ಪರ ವಕೀಲರು**

ನಾನು ಸದರಿ ದಿನ ಕೆಲಸಕ್ಕೆ ಹೋಗಿದ್ದು ಮುಗಿಸಿಕೊಂಡು ಬಂದಿರುತ್ತೇನೆ. ಕೆಸ್ತೂರು ಕೊಪ್ಪಲು ಗ್ರಾಮಕ್ಕೆ ನಿರ್ದಿಷ್ಟ ಮತ್ತು ಕೆಲವೇ ಬಸ್ ಗಳು ಹೋಗುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಬಸ್ ನಿಲ್ಲಿಸುವ ಮೊದಲೇ ಜನರು ಸೀಟ್ ನ್ನು ಹಿಡಿಯುವ ಸಲುವಾಗಿ ಬಸ್ ನ್ನು ಹತ್ತಲು ಪ್ರಯತ್ನಿಸುತ್ತಾರೆ ಎಂದರೆ ಸರಿ.

ಸಾಮಾನ್ಯವಾಗಿ ಚಾಲಕನು ನಿರ್ವಾಹಕನ ಸೂಚನೆಯ ಮೇರೆಗೆ ಬಸ್ ನ್ನು ಓಡಿಸಬೇಕು ಅದೇ ರೀತಿ ನಿಲ್ಲಿಸಬೇಕು ಎಂದರೆ ಸರಿ. ನಾನು ಮುಖ್ಯ ವಿಚಾರನೆಯಲ್ಲಿ ನೇರವಾಗಿ ವಿಜಯವರನ್ನು ಮೈಸೂರಿನ ಜೆ ಎಸ್ ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ ಎಂದು ತಿಳಿಸಿರುತ್ತೇನೆ ಎಂರದೆ ಸರಿ. ನಾನು ಅಪಘಾತ ಸ್ಥಳದಲ್ಲಿ ಆರೋಪಿಯನ್ನು ಮತ್ತು ಬಸ್ ನ್ನು ನೋಡಿರುವುದಿಲ್ಲ. ನಮ್ಮ ತಾಯಿ ನೋಡಿರುತ್ತಾರೆ.

ನನಗೆ ಆರೋಪಿಯನ್ನು ನಮ್ಮ ತಾಯಿ ತೋರಿಸಿ ಅಪಘಾತ ಪಡಿಸಿದ ವ್ಯಕ್ತಿ ಎಂದು ತಿಳಿಸಿರುತ್ತಾರೆ. ಅಪಘಾತದ ಆಗಿದೆ ಎಂದು ತಿಳಿಸಲಾದ ಸ್ಥಳದಲ್ಲಿ ಅಂಗಡಿಗಳು ಮತ್ತು ಎ ಟಿ ಎಂ ಇದೆ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಬಸ್ ನಿಲ್ದಾಣದಲ್ಲಿ ಸಾಕಷ್ಟು ಜನರು ಇರುತ್ತಾರೆ ಎಂದರೆ ಸರಿ. ಅದೇ ರೀತಿ ಬಸ್ ಗಳನ್ನು ನಿಯಂತ್ರಿಸಲು ಟಿ ಸಿ

ಇರುತ್ತಾರೆ ಎಂದರೆ ಸರಿ. ನಮ್ಮ ಚಿಕ್ಕಪ್ಪನ ಮಗ ವಿಜಯ ಬಸ್ ನಿಲ್ಲುವ ಮೊದಲೇ ಸೀಟ್ ನನ್ನು ಪಡೆಯುವ ಸಲುವಾಗಿ ಬಸ್ ನ್ನು ಹತ್ತುವಾಗ ಕೆಳಗೆ ಬಿದ್ದಿರುತ್ತಾರೆ ಎಂದರೆ ಸರಿಯಲ್ಲ.

ಯಾವುದೋ ಬೇರೆ ವಾಹನದಲ್ಲಿ ಅಪಘಾತವಾಗಿದ್ದನ್ನು ದುರುಪಯೋಗ ಪಡಿಸಿಕೊಂಡು ಆರೋಪಿಯ ವಿರುದ್ಧ ದೂರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ಬಸ್ ನ ಚಿತ್ರವಿರುವ ಫೊಟೋಗಳನ್ನು ತೋರಿಸಿ ಸದರಿ ಚಿತ್ರದಲ್ಲಿ ಹಿಂದಿನ ಎಡಭಾಗದ ಚಕ್ರ ಯಾವುದೇ ರಕ್ತ ಗುರುತುಗಳು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಬಸ್ ನ್ನು ತೊಳೆದಿರಬಹುದು ಎಂದು ತಿಳಿಸಿರುತ್ತಾರೆ.

ಸಾಮಾನ್ಯವಾಗಿ ಕೆ ಎಸ್ ಆರ್ ಟಿ ಸಿ ಬಸ್ ಗಳನ್ನು ಕೆ ಎಸ್ ಆರ್ ಟಿ ಸಿ ಘಟಕದಲ್ಲಿ ತೊಳೆಯುತ್ತಾರೆ ಎಂದರೆ ಸರಿ. ನಿಪಿ 1 ರಲ್ಲಿಯ ಕೈ ಬರವಣಿಗೆ ನನ್ನದಲ್ಲ. ಅದನ್ನು ಬೇರೆಯವರು ನಾನು ಹೇಳಿದಂತೆ ಬರೆದಿರುತ್ತಾರೆ. ಬೇರೆಯವರು ನಾನು ಹೇಳಿದಂತೆ ಬರೆದಿದ್ದಾಗಿ ದೂರಿನಲ್ಲಿ ನಮೂದಾಗಿಲ್ಲ. ನಾನು ಘಟನೆ ನಡೆದಾಗ ಘಟನೆ ನಡೆದಿರುವುದನ್ನು ನೋಡಿರುವುದಿಲ್ಲ ಆದರೆ ಸ್ಥಳಕ್ಕೆ ಹೋದಾಗ ರಕ್ತ ಕಲೆಯನ್ನು ನೋಡಿದಾಗ ಇದೇ ಸ್ಥಳ ಎಂದು ಗೊತ್ತಾಗಿರುತ್ತದೆ.

ಕುಮಾರಸ್ವಾಮಿ ನನಗೆ ಪರಿಚಯ ಆದರೆ ಗುರುಪ್ರಸಾದ ನನಗೆ ಪರಿಚಯವಿಲ್ಲ. ನಾನು ಕಚ್ಚಾ ನಕ್ಷೆಗೇ ಯಾವುದೇ ಸಹಿ ಮಾಡಿಲ್ಲರುವುದಿಲ್ಲ. ಒಂದು ವೇಳೆ ನಾನು ಸದರಿ ನಕ್ಷೆಯನ್ನು ಸ್ಥಳದಲ್ಲಿ ತಯಾರು ಮಾಡಿದ್ದೇ ಆದಲ್ಲಿ ಸದರಿ ನಕ್ಷ್ಯಗೂ ಸಹ ನನ್ನ ಸಹಿಯನ್ನು ಮಾಡಬೇಕಿತ್ತು ಸದರಿ ನಕ್ಷೆಯನ್ನು ಮತ್ತು ಪಂಚನಾಮೆಯನ್ನು ಪೊಲೀಸ್ ಠಾಣೆಯಲ್ಲಿ ತಯಾರಿಸಿರುವ ಕಾರಣ ನಕ್ಷೆ ಮತ್ತು ಪಂಚನಾಮೆಗೆ ಸಹಿಯನ್ನು ಪಡದಿಲ್ಲ ಎಂದರೆ ಸರಿಯಲ್ಲ.

ನಿಪಿ 3 ಅಮಾನತು ಪಂಚನಾಮೆಯಲ್ಲಿ ಬಸ್ ನ ಹಿಂದಿನ ಎಡಚಕ್ರಕ್ಕೆ ರಕ್ತದ ಕಲೆಯಾಗಿದೆ ಎಂದು ನಮೂದು ಮಾಡಿಲ್ಲ. ನಿಪಿ 3 ಅಮಾನತು ಪಂಚನಾಮೆಯ ಸ್ಥಳದ ಚೆಕ್ ಬಂದಿ ನನಗೆ ಗೊತ್ತಿಲ್ಲ. ನಮ್ಮ ಚಿಕ್ಕಪ್ಪನ ಮಗ ಮೃತ ಪಟ್ಟಿರುವ ಕಾರಣ ನನಗೆ

ಪ್ರಕರಣದ ಕುರಿತು ಯಾವುದೇ ಮಾಹಿತಿ ಗೊತ್ತಿರದಿದ್ದರು ಸಹ  ಸುಳ್ಳು ದೂರನ್ನು ದಾಖಲಿಸಿ,  ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು  ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಚಿಕ್ಕಪ್ಪನ ಮಗ ಮೃತ ಪಟ್ಟಿರುವ ಬಗ್ಗೆ ಪರಿಹಾರಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದೇವೆ. ಸದರಿ ಅರ್ಜಿಯಲ್ಲಿ ಪರಿಹಾರವನ್ನು ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

**(ಚಂದನ ಎಸ್ )**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ